
# ಸುದ್ದಿಸಂಚಯ

☛ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಂಗಸಂಸ್ಥೆಯಾದ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆ (RIMSE)ಯು ೨೦ ಮೇ ೨೦೦೬ರಿಂದ ೨೬ ಮೇ ೨೦೦೬ರವರೆಗೆ ಗ್ರಾಮಾಂತರ ಪ್ರದೇಶಗಳ ಯುವಕರಿಗೆ ಆಧ್ಯಾತ್ಮಿಕ ಶಿಬಿರವನ್ನು ಏರ್ಪಡಿಸಿತ್ತು. ಕೇವಲ ನಲವತ್ತು ರೂಪಾಯಿಗಳ ಪ್ರವೇಶಶುಲ್ಕವನ್ನು ಇಡಲಾಗಿತ್ತು. ರಾಜ್ಯದ ಹಲವೆಡೆಗಳಿಂದ ಬಂದ ೧೭೦ ವಿದ್ಯಾರ್ಥಿಗಳು ಭಾಗವಹಿಸಿದರು. ಧ್ಯಾನ, ಶಾಂತಿ ಮಂತ್ರಗಳು ಹಾಗೂ ವೈದಿಕ ಮಂತ್ರಗಳನ್ನು ಹೇಳಿಕೊಟ್ಟು ಅದರೊಂದಿಗೆ ಯೋಗಾಸನ, ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಪಟ್ಟ ವಿಷಯಗಳು, ಭಗವದ್‌ಗೀತೆ, ದಿವ್ಯತ್ರಯರ ಜೀವನ–ಸಂದೇಶಗಳು, ಭಾರತೀಯ ಸಂಸ್ಕೃತಿಯ ಹಿರಿಮೆ ಕುರಿತಂತೆ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವಂತಹ ಪ್ರವಚನಗಳನ್ನು ಏರ್ಪಡಿಸಲಾಗಿತ್ತು. ವಿಶಾಲವಾದ ಗ್ರಂಥಾಲಯದ ಸೌಲಭ್ಯವನ್ನೂ ಒದಗಿಸಲಾಗಿತ್ತು. ಕಡೆಯ ದಿನದಂದು ಮೈಸೂರು ನಗರದ ಐತಿಹಾಸಿಕ ಹಾಗೂ ಪ್ರೇಕ್ಷಣೀಯ ಸ್ಥಳಗಳ ನೋಡಿಬರುವ ವ್ಯವಸ್ಥೆಯಿತ್ತು. ಭಾಗವಹಿಸಿದವರಿಗೆ ಪ್ರಯಾಣದ ಒಂದು ಕಡೆಯ ವೆಚ್ಚವನ್ನೂ ಕೂಡ ಸಂಸ್ಥೆ ನೀಡಿತು. ಶಾಂತ ವಾತಾವರಣ ಹಾಗೂ ಉತ್ತಮ ವಿಚಾರಗಳಿಂದ ಪ್ರಭಾವಿತರಾದ ಯುವಕರು ಸಮೃದ್ಧರಾದೆವು ಎಂಬ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಶಿಬಿರಾರ್ಥಿಗಳು ತರಗತಿಯಲ್ಲಿರುವ ಹಾಗೂ ತೋಟದಲ್ಲಿ ಸೇವೆ ಮಾಡುತ್ತಿರುವ ದೃಶ್ಯಗಳನ್ನು ಇಲ್ಲಿ ನೀಡಲಾಗಿದೆ.





☛ ಅರುಣಾಚಲ ಪ್ರದೇಶದ ಇಟಾನಗರದಲ್ಲಿರುವ ಕೇಂದ್ರವು ಗ್ರಾಮೀಣ ನೈರ್ಮಲ್ಯ ಯೋಜನೆಯನ್ನು ಪ್ರಾರಂಭಿಸಿದೆ. ಏಪ್ರಿಲ್ ೨೭ರಂದು ಜೀರೋ ಪ್ರದೇಶದ ಹಾಂಗ್‌ಬಸ್ತಿಯಲ್ಲಿ ಉದ್ಘಾಟಿತಗೊಂಡ ಈ ಸೇವೆಗೆ ರಾಮಕೃಷ್ಣ ಸಂಘದ ಪ್ರಧಾನ ಕಾರ್ಯದರ್ಶಿಗಳು ಚಾಲನೆ ನೀಡಿದರು. ಏಪ್ರಿಲ್ ೨೮ರಂದು ಆಶ್ರಮದ ಆಸ್ಪತ್ರೆಯಲ್ಲಿ ಪೂಜ್ಯರು ಹತ್ತು ಒಳರೋಗಿಗಳ ಸಿ.ಸಿ.ಯು. ವಿಭಾಗ ಮತ್ತು ೧೦ ಒಳರೋಗಿಗಳ ಕಣ್ಣು ಚಿಕಿತ್ಸಾ ವಿಭಾಗಗಳ ಕಟ್ಟಡಗಳ ಶಂಕುಸ್ಥಾಪನೆಯನ್ನೂ ನೆರವೇರಿಸಿದರು.

☛ ಏಪ್ರಿಲ್ ೩೦ರಿಂದ ಮೇ ೨೦ರವರೆಗೆ ಹೈದರಾಬಾದಿನ ರಾಮಕೃಷ್ಣ ಮಠವು ಮೂರು ವಾರಗಳ ಮಕ್ಕಳ ಬೇಸಿಗೆ ಶಿಬಿರವನ್ನು ಆಯೋಜಿಸಿತ್ತು. ೮ರಿಂದ ೧೫ ವರ್ಷ ವಯಸ್ಸಿನ ೮೫೦ ಮಕ್ಕಳು ಶಿಬಿರದಲ್ಲಿ ಭಾಗವಹಿಸಿದ್ದರು. ಯೋಗಾಸನ, ಭಜನೆ, ಧ್ಯಾನ, ವೇದಪಾಠ ಹಾಗೂ ನೈತಿಕ ಮೌಲ್ಯಗಳ ತರಗತಿಗಳನ್ನು ನಡೆಸಲಾಯಿತು.

**ಸ್ವಾಮಿ ವಿವೇಕಾನಂದ ಶೈಕ್ಷಣಿಕ ಸಂಸ್ಥೆ (ರಿ.), ಬೆಂಗಳೂರು**

ಬೆಂಗಳೂರಿನ ಸ್ವಾಮಿ ವಿವೇಕಾನಂದ ಶೈಕ್ಷಣಿಕ ಸಂಸ್ಥೆ (ರಿ.) (ಖಾಸಗಿ) ಒಂದು ಸ್ಮರಣಸಂಚಿಕೆಯನ್ನು ಪ್ರಕಟಿಸುತ್ತಿದೆ. ಈ ಪ್ರಕಟಣೆಯಿಂದ ಬರುವ ಹಣವನ್ನು ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುವ ಪ್ರತಿಭಾವಂತ ಬಡ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ಪುರೋಭಿವೃದ್ಧಿಗಾಗಿ ಹಾಗೂ ಶ್ರೀ ವಿವೇಕಾನಂದ ಸೇವಾಶ್ರಮದ ವತಿಯಿಂದ ಹಳ್ಳಿಗಳಲ್ಲಿನ ಬಡವರ ಸರ್ವತೋಮುಖ ಆರೋಗ್ಯ ಸುಧಾರಣೆಗಾಗಿ ವಿನಿಯೋಗಿಸಲು ತೀರ್ಮಾನಿಸಲಾಗಿದೆ. ಸ್ನೇಹಿತರು, ಅಭಿಮಾನಿಗಳು, ಬಂಧುಗಳು ಮತ್ತು ಹಿತೈಷಿಗಳು ಉದಾರವಾಗಿ ಧನಸಹಾಯ ಮಾಡಿ ಸಹಕರಿಸಬೇಕಾಗಿ ವಿನಮ್ರ ವಿನಂತಿ. ದೇಣಿಗೆಯನ್ನು, ನಗದು/ಚೆಕ್/ಡ್ರಾಫ್ಟನ್ನು ಕಾರ್ಯದರ್ಶಿ, ಸ್ವಾಮಿ ವಿವೇಕಾನಂದ ಶೈಕ್ಷಣಿಕ ಸಂಸ್ಥೆ (ರಿ.) ಸಿ.ಎ. ನಂ. 5 ಎ, 3ನೇ ಅಡ್ಡರಸ್ತೆ, 2ನೇ ಬ್ಲಾಕ್, ಬನಶಂಕರಿ 1ನೇ ಹಂತ, ಬೆಂಗಳೂರು – 560 050 ಈ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

*Managing Editor:* **Swami Nityasthananda** *Editor:* **Swami Atmajnanananda**
*Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore.*